**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಸಿಸಿ ನಂ 7/2022**

**ಸಿ.ಡಬ್ಲೂ: 04 ಪಿಡಬ್ಲೂ: 04**

| | |
|---|---|
| ಸಾಕ್ಷಿದಾರರ ಹೆಸರು | ಮಂಜುನಾಥ |
| ತಂದೆಯ ಹೆಸರು | ಡಿ. ಸದಾಶಿವ |
| ವಯಸ್ಸು | ಸುಮಾರು 50 ವರ್ಷ |
| ಉದ್ಯೋಗ | ಚಾಲಕ |
| ವಾಸ ಸ್ಥಳ | ದೊಡ್ಡಬಳ್ಳಾಪುರ |

**ದಿನಾಂಕ: 24.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಅಭಿಯೋಜಕ ರವರಿಂದ**

ಆರೋಪಿ ಗೊತ್ತು. ಸಾಕ್ಷಿಯು ಮಾಲು ಅಮಾನತ್ತುಪಂಚನಾಮೆಯಲ್ಲಿರುವ ತನ್ನ ತನ್ನ ಸಹಿಯನ್ನು ನೋಡಿ ಗುರುತಿಸಿದ ಮಾಲು ಅಮಾನತ್ತು ಪಂಚನಾಮೆಯನ್ನು ನಿಪಿ-3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ದಿ: 18.09.2021 ರಂದು ಬೆಳಿಗ್ಗೆ 11-30 ರಿಂದ 12-00 ಗಂಟೆ ಸಮಯದವರೆಗೂ ನಿಪಿ-3 ನ್ನು ಜರುಗಿಸಿದ್ದು, ಅದನ್ನು ಚಾಸಾ-1 ರವರ ಮನೆಯಲ್ಲಿ ಕಳ್ಳತನದ ವಿಚಾರವಾಗಿ ಮಾಡಿದ್ದು, ಅದಕ್ಕೆ ನಾನು ಸಹಿಯನ್ನು ಮಾಡಿರುತ್ತೇನೆ. ನಿಪಿ-3 ನ್ನು ನಂಜಪ್ಪರವರು ಬಾಡಿಗೆ ಮನೆಯಲ್ಲಿ ಮಾಡಲಾಗಿರುತ್ತದೆ ಹಾಗೂ ಸದರಿ ಸಮಯದಲ್ಲಿ ಒಂದು ರಿಂಗ್ ಮತ್ತು ಚೈನ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ರಿಂಗ್ ಮತ್ತು ಚೈನ್‌ನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ನಿಪಿ-3 ಕ್ಕೆ ನನ್ನ ಸಮಕ್ಷಮ ಚಾಸಾ-5 ಮತ್ತು 6 ರವರು ಸಹಿ ಮಾಡಿರುತ್ತಾರೆ. ನಿಪಿ-3 ರಲ್ಲಿ ಬರೆದಿರು ವಿಚಾರಗಳು ಗೊತ್ತಿರುತ್ತವೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ</u> ಆರೋಪಿ ಪರ ವಕೀಲರಿಂದ**

ನನಗೆ ನೋಟೀಸ್‌ನ್ನು ದಿಃ 18.09.2021 ರಂದು ಪೋಲೀಸರು ಬಂದಾಗ ನೀಡಿರುತ್ತಾರೆ. ಮೊದಲು ಠಾಣೆಗೆ ಹೋಗಿ ನಂತರ ನಿಪಿ-3 ನ್ನು ಜರುಗಿಸಿದ ಸ್ಥಳಕ್ಕೆ ಬಂದಿರುತ್ತೇನೆ. ನಿಪಿ-3 ನ್ನು ಒಬ್ಬ ಮುಖ್ಯ ಪೇದೆಯವರು ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿರುತ್ತಾರೆ. ನಿಪಿ-3 ನ್ನು ಜರುಗಿಸಲಾದ ಸ್ಥಳದ ಚೆಕ್ಕುಬಂಧಿ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಚಿನ್ನದ ಸರ ಮತ್ತು ಉಂಗುರಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಯಾವುದೇ ಪಂಚನಾಮೆ ಕ್ರಮವನ್ನು ಜರುಗಿಸಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ .**